ಒ.ಎಸ್. ನಂ.112/2016
ಪಿಡಬ್ಲು-1

ದಿನಾಂಕ 25.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ 1 ರಿಂದ 8ನೆ ಪ್ರತಿವಾದಿ ಪರ ಶ್ರೀ MRH ವಕೀಲರಿಂದ

ನನ್ನ ವಾದ ಪತ್ರದಲ್ಲಿ ನನ್ನ ವಯಸ್ಸು 35-ವರ್ಷ ಎಂದು ಬರೆಸಿದ್ದು ಆ ಕುರಿತು ಯಾವುದೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಆಧಾರ ಕಾರ್ಡ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ವಯಸ್ಸು 35 ಕ್ಕಿಂತ ಹೆಚ್ಚು ಇದ್ದು ನನಗೆ 35-ವರ್ಷ ವಯಸ್ಸು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ದಾಖಲಿಸಲು ವಕೀಲರಿಗೆ ನಾನೆ ಮಾಹಿತಿ ನೀಡಿರುತ್ತೇನೆ. ನಾನು ಶಾಲೆಯನ್ನು ಕಲಿತಿಲ್ಲ.

ಈ ದಾವೆಯಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ನನಗೆ ಓದಲು ಬರುವುದಿಲ್ಲ. ವಾದ ಪತ್ರದಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಹಾಜರುಪಡಿಸಿದ ವಂಶಾವಳಿಯು ತಪ್ಪಾಗಿದ್ದು ಸುಳ್ಳು ಮಾಹಿತಿಯಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಹೆಸರು ಹಣಮಂತರಾಯ ಎಂದರೆ ಸರಿ.

ಬಸಲಿಂಗಪ್ಪ ನಿನಗೆ ಏನಾಗುತ್ತಾರೆ ಎಂದರೆ ಸಾಕ್ಷಿ ಅಜ್ಜನಾಗಬೇಕು ಎಂದು ನುಡಿಯುತ್ತಾರೆ. ಬಸಲಿಂಗಪ್ಪನ ತಂದೆಯ ಹೆಸರು ಭೀಮಪ್ಪ ಇರುತ್ತದೆ. ಬಸಲಿಂಗಪ್ಪನ ತಂದೆಯ ಹೆಸರು ಭೀಮಪ್ಪ ಇರುತ್ತದೆ ಎಂದು ನನ್ನ ದಾವೆಯ ವಂಶಾವಳಿಯಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಬಸಲಿಂಗಪ್ಪ ಎಷ್ಟು ಜನ ಅಣ್ಣತಮ್ಮಂದಿರು ಎಂದು ನನಗೆ ಗೊತ್ತಿಲ್ಲ. ಬಸಲಿಂಗಪ್ಪನ ತಂದೆಗೆ ಎಷ್ಟು ಅಣ್ಣತಮ್ಮಂದಿರಿದ್ದರು ಎಂದು ನನಗೆ ಗೊತ್ತಿಲ್ಲ. ಬಸಲಿಂಗಪ್ಪನ ತಂದೆಯ ಅಣ್ಣತಮ್ಮಂದಿರು ನಾಗಪ್ಪ ಮತ್ತು ಭೀಮಪ್ಪ ಎಂದು ದಾವೆಯಲ್ಲಿ ಬರೆಸಿದ್ದು ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ. ಬಸಲಿಂಗಪ್ಪನಿಗೆ ಮಡಿಮಲ್ಲಮ್ಮ ಎಂಬ ಮೊದಲನೆ ಹೆಂಡತಿಯಿದ್ದರು ಎಂದರೆ ಸರಿಯಲ್ಲ. ಮಡಿಮಲ್ಲಮ್ಮ ಮೃತಪಟ್ಟ ನಂತರ ಬಸಲಿಂಗಪ್ಪರವರು ಲಕ್ಷ್ಮಿಬಾಯಿ ಎನ್ನುವವರ ಎರಡನೆ ಮದುವೆಯಾಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು

ಬಸಲಿಂಗಪ್ಪರವರು ಲಕ್ಷ್ಮಿಬಾಯಿಯವರನ್ನು ಮಾತ್ರ ಮದುವೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಬಸಲಿಂಗಪ್ಪರವರು ಲಕ್ಷ್ಮಿಬಾಯಿಯವರನ್ನು ಮದುವೆಯಾದಾಗ ಲಕ್ಷ್ಮಿಬಾಯಿಯವರಿಗೆ ಮೊದಲೆ ಗಂಡನಿಂದ 01-ವರ್ಷದ ಮಗು ಇತ್ತು ಸದರಿ ಮಗುವಿನ ಹೆಸರು ಹಣಮಂತರಾಯ ಎಂದರೆ ಸರಿಯಲ್ಲ. ಸದರಿ ಹಣಮಂತರಾಯನು ಲಕ್ಷ್ಮಿಬಾಯಿಯವರ ಮೊದಲನೆ ಗಂಡ ಶಿವಪ್ಪನ ಮಗನಾಗಿರುತ್ತಾನೆ ಎಂದರೆ ಸರಿಯಲ್ಲ. ಹಣಮಂತರಾಯ ಬಸಲಿಂಗಪ್ಪನ ಕುಟುಂಬಕ್ಕೆ ಯಾವುದೆ ರೀತಿಯ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಹಣಮಂತರಾಯನು ತನ್ನ ಜೀವನ ಕಾಲದಲ್ಲಿ ಬಸಲಿಂಗಪ್ಪ ತನ್ನ ತಂದೆ ಅಲ್ಲದ ಕಾರಣ ಯಾವುದೆ ಪಾಲು ಕೇಳಿಲ್ಲ ಎಂದರೆ ಸರಿಯಲ್ಲ.

ಹಣಮಂತರಾಯ ಬಸಲಿಂಗಪ್ಪನ ಕುಟುಂಬಕ್ಕೆ ಯಾವುದೆ ರೀತಿಯ ಸಂಬಂಧವಿಲ್ಲ ಹಾಗೂ ಅವರಿಗೆ ಯಾವುದೆ ಪಾಲು ಬರುವುದಿಲ್ಲ ಆದ್ದರಿಂದ ನಿನಗೂ ಸಹ ಪಾಲು ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ದಾವಾಸ್ತಿಯಲ್ಲಿ ಪಾಲು ಪಡೆಯಬೇಕೆನ್ನು ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಬಸಲಿಂಗಪ್ಪನವರಿಗೆ ತೇಜಪ್ಪ ಎಂಬ ಮಗನಿರುತ್ತಾನೆ ಎಂದರೆ ಸಾಕ್ಷಿ ತೇಜಪ್ಪ, ಹಣಮಂತರಾಯ ಮತ್ತು ಬಸಮ್ಮ ಎಂಬ ಮಕ್ಕಳಿರುತ್ತಾರೆ ಎಂದು ನುಡಿಯುತ್ತಾರೆ. ಬಸಲಿಂಗಪ್ಪನಿಗೆ ತೇಜಪ್ಪ ಮತ್ತು ಬಸಮ್ಮ ಮಾತ್ರ ಮಕ್ಕಳಿದ್ದು ಹಣಮಂತರಾಯ ಬಸಲಿಂಗಪ್ಪನ ಮಗ ಅಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಹಣಮಂತರಾಯ ಕೇವಲ ದಾವಾ ಸ್ವತ್ತಿನಲ್ಲಿ ಕೆಲಸ ಮಾಡುತ್ತಿದ್ದು ಎಂದು ನಾನು ಬರೆಸಿದ್ದು ಆತನಿಗೆ ಯಾವುದೆ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ. ಲಕ್ಷ್ಮಿಬಾಯಿ ಬಸಲಿಂಗಪ್ಪನ ಕುಟುಂಬದಲ್ಲಿ ಹಣಮಂತರಾಯ ಬೇರೆ ಕುಟುಂಬದೊಂದಿಗೆ ವಾಸ ಮಾಡುತ್ತಿದ್ದ ಎಂದರೆ ಸರಿಯಲ್ಲ. ಹಣಮಂತರಾಯ ಬಸಲಿಂಗಪ್ಪನ ಜೊತೆ ವಾಸ ಮಾಡುತ್ತಿದ್ದ ಬಗ್ಗೆ ರೇಶನ ಕಾರ್ಡ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ನಾನು ನನ್ನ ವಕೀಲರಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಹಣಮಂತರಾಯ ಬೇರೆ ಕುಟುಂಬದಲ್ಲಿ ವಾಸವಿದ್ದು ಬಸಲಿಂಗಪ್ಪನ ಕುಟುಂಬದೊಂದಿಗೆ ವಾಸವಿದ್ದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳ ಚೆಕಬಂದಿಗಳನ್ನು ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ

ಸಾಕ್ಷಿ ನಮ್ಮ ವಕೀಲರಿಗೆ ಗೊತ್ತು ಎಂದು ಹೇಳುತ್ತಾರೆ. ದಾವಾ ಮನೆಗಳ ಚೆಕಬಂದಿಗಳನ್ನು ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ.

ಬಸಲಿಂಗಪ್ಪ ಮೃತಪಟ್ಟ ನಂತರ ಎಲ್ಲಾ ಆಸ್ತಿಗಳು ತೇಜಪ್ಪನ ಹೆಸರಿಗೆ ಆಗಿರುತ್ತವೆ ಎಂದರೆ ಸರಿ. ಸದರಿ ತೇಜಪ್ಪ ಮೃತಪಟ್ಟ ನಂತರ ಎಲ್ಲಾ ಆಸ್ತಿಗಳು ನಾಗಪ್ಪನ ಹೆಸರಿಗೆ ಆಗಿರುತ್ತವೆ ಎಂದರೆ ಸರಿ. ಬಸಲಿಂಗಪ್ಪನ ಮಗ ತೇಜಪ್ಪ ಮತ್ತು ತೇಜಪ್ಪನ ಮಗ ನಾಗಪ್ಪರವರು ನಿಜವಾದ ವಾರಸುದಾರರಾದ ಕಾರಣ ಎಲ್ಲಾ ಆಸ್ತಿಗಳು ಅವರ ಹೆಸರಿಗೆ ಆಗಿರುತ್ತವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲದಂತೆ ಅವರ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ.

ಮಲ್ಲಾಬಾದ ಗ್ರಾಮದ ಸರ್ವೆ ನಂ.134/1 ನಾಗಪ್ಪರವರ ಹೆಸರಿಗೆ ಇದ್ದು ಯಾವುದೆ ದಾಖಲಾತಿ ಇಲ್ಲದೆ ನನ್ನ ಹೆಸರಿಗೆ ವರ್ಗಾವಣೆ ಮಾಡಿಕೊಂಡಿರುತ್ತೇನೆ ಎಂದರೆ ಸಾಕ್ಷಿ ನಾಗಪ್ಪನವರೆ ನನ್ನ ಹೆಸರಿಗೆ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈ ಕುರಿತು ಯಾವುದಾದರೂ ದಾಖಲೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಕೇವಲ ಮುಟೆಷನ ಮಾತ್ರ ಹಾಜರುಪಡಿಸಿದ್ದು ಆದರೆ ಯಾವ ರೀತಿ ಆದ ಬಗ್ಗೆ ವರದಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾಗಪ್ಪನವರು ನನ್ನ ಹೆಸರಿಗೆ ಯಾವುದೆ ಕಾಗದ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಕಂದಾಯ ಇಲಾಖೆಯವರೊಂದಿಗೆ ಶಾಮೀಲಾಗಿ ಖೊಟ್ಟಿ ಮುಟೇಷನ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಾಗಪ್ಪನವರು ನನ್ನ ಹೆಸರಿಗೆ ವರ್ಗಾವಣೆ ಮಾಡಿಕೊಟ್ಟ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಯಾವುದೆ ಕಾಗದ ಪತ್ರಗಳಿಲ್ಲ ಆದ್ದರಿಂದ ನಮ್ಮ ವಕೀಲರಿಗೆ ಯಾವುದೆ ಕಾಗದ ಪತ್ರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-42 ಮತ್ತು 43 ಗಳನ್ನು ಖೊಟ್ಟಿ ರೀತಿಯಿಂದ ಮುಟೇಷನ ಮಾಡಿಕೊಂಡು ಅದರ ಆಧಾರದ ಮೇಲಿಂದ ಉಳಿದ ಸ್ವತ್ತುಗಳಲ್ಲಿ ನನಗೆ ಪಾಲು ಬರುತ್ತದೆ ಎಂದು ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ನನಗೆ ದಾವಾ ಸ್ವತ್ತುಗಳ ಸರ್ವೆ ನಂಬರ ಮತ್ತು ವಿಸ್ತೀರ್ಣ ನನಗೆ ಗೊತ್ತಿರುತ್ತದೆ. ದಾವಾ ಸ್ವತ್ತುಗಳ ಸರ್ವೆ ನಂ.88 ಒಟ್ಟು ಹದಿನಾರುವರೆ ಎಕರೆ ಇರುತ್ತದೆ. ಸರ್ವೆ ನಂ.112 ಒಟ್ಟು 06-ಎಕರೆಗಿಂತ ಮೇಲೆ ಇರುತ್ತದೆ. ಸರ್ವೆ ನಂ.134 ರಲ್ಲಿ ಹತ್ತು ಹತ್ತು ಎಕರೆಯ ಎರಡು ಜಮೀನುಗಳಿದ್ದು ಮೇಲೆ 30 ಗುಂಟೆ ಜಾಸ್ತಿ ಇರುತ್ತವೆ.

ದಾವಾ ಸ್ವತ್ತುಗಳಲ್ಲಿ ಪ್ರಸ್ತುತ ಯಾರ ಹೆಸರಿಗೆ ಪಹಣಿ ಇರುತ್ತವೆ ಎಂದರೆ ಸಾಕ್ಷಿ ನಾಗಪ್ಪನ ಹೆಸರಿಗೆ ಇದ್ದು 02-ವರ್ಷ ಹಿಂದೆ ಆತನು ತನ್ನ ಮಕ್ಕಳ ಹೆಸರಿಗೆ ವಾಟ್ನಿ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಎಷ್ಟು ಹಿಸ್ಸೆಗಳು ಮತ್ತು ಯಾರ ಹೆಸರಿಗೆ ಇವೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾಗಪ್ಪನವರು ಪಹಣಿ ಮಾಡಿಕೊಡುವಾಗ ರೂ.4,50,000/- ಸಾಲ ಇದ್ದು ಸದರಿ ಸಾಲವನ್ನು ನಾನೆ ಮರುಪಾವತಿ ಮಾಡಿಸುತ್ತೇನೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ಹಣಮಂತರಾಯನು ಬಸಲಿಂಗಪ್ಪನ ಕುಟುಂಬದಲ್ಲಿ ಜಂಟಿ ಕುಟುಂಬದ ಸದಸ್ಯನಲ್ಲ ಮತ್ತು ದಾವಾ ಸ್ವತ್ತುಗಳ ಜಂಟಿ ಸ್ವಾಧೀನತೆ ಹೊಂದಿಲ್ಲದ ಕಾರಣ ಅವನಿಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಬೆಳೆದ ದವಸ ಧಾನ್ಯಗಳನ್ನು ಹಣಮಂತರಾಯನಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮೃತಪಟ್ಟು 10-15 ವರ್ಷಗಳಾಗಿರುತ್ತವೆ. ನನ್ನ ತಂದೆ ಮೃತಪಟ್ಟು 12-ವರ್ಷಗಳಾಗಿರುವುದರಿಂದ ನನಗೆ ದಾವೆಯಲ್ಲಿ ಪಾಲು ಕೇಳುವ ಹಕ್ಕಿಲ್ಲ ಎಂದರೆ ಸರಿಯಲ್ಲ. ನಾನು ಸಮಾರು ವರ್ಷಗಳಿಂದ ಪಾಲು ಕೇಳುತ್ತಾ ಬಂದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ತೇಜಪ್ಪ ಮತ್ತು ನಾಗಪ್ಪರವರ ಹೆಸರಿಗೆ ಪಹಣಿಯಾದ ಬಗ್ಗೆ ಸಹಾಯಕ ಆಯುಕ್ತರ ಮುಂದೆ ಅಪೀಲು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಈ ಕುರಿತು ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ತೇಜಪ್ಪ ಮತ್ತು ನಾಗಪ್ಪರವರ ಹೆಸರಿಗೆ ಪಹಣಿಯಾದ ಬಗ್ಗೆ ಪ್ರಶ್ನಿಸಿ ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ತೇಜಪ್ಪನ ಹೆಸರಿಗೆ ಪಹಣಿಯಾದ ಬಗ್ಗೆ ಪ್ರಶ್ನಿಸಿ ನನ್ನ ತಂದೆ ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನಿಸಿರುತ್ತಾರಾ ಎಂದರೆ ಸಾಕ್ಷಿ ಎಲ್ಲಿಯೂ ಪ್ರಶ್ನಿಸಿಲ್ಲ ಎಂದು

ನುಡಿಯುತ್ತಾರೆ. ನನ್ನ ತಂದೆ ಮತ್ತು ನನಗೆ ದಾವಾ ಆಸ್ತಿಗಳಲ್ಲಿ ಹಕ್ಕಿಲ್ಲ ಎಂದರೆ ಸರಿಯಲ್ಲ.

ನಿಪಿ-42 ಮತ್ತು 43 ಗಳನ್ನು ಖೊಟ್ಟಿ ರೀತಿಯಿಂದ ಮುಟೇಷನ ಮಾಡಿಕೊಂಡು ಅದರ ಆಧಾರದ ಮೇಲಿಂದ ಉಳಿದ ಸ್ವತ್ತುಗಳಲ್ಲಿ ನನಗೆ ಪಾಲು ಬರುತ್ತದೆ ಎಂದು ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ನಾನು ಪ್ರತಿವಾದಿಯರ ಜೊತೆ ವಾಸವಾಗಿದ್ದೆವು ಎಂದು ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಆದರೆ ಅವರು ಹಾಜರುಪಡಿಸಿರುತ್ತಾರೊ ಇಲ್ಲವೊ ಎಂದು ನಿನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನನ್ನ ವಕೀಲರು ಹಾಜರುಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ನೀಡಿರುತ್ತೇನೆ. ಸುಳ್ಳು ದಾವೆ ಹಾಗೂ ಸುಳ್ಳು ಪ್ರಮಾಣ ಪತ್ರದಲ್ಲಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ